ನಾನು ಪುಸ್ತಾಪ ಮಾಡುತ್ತಿಲ್ಲ. ಆದರೆ ೧೫೦–೨೦೦ ಆನೆಗಳನ್ನು ರಕ್ಷಣೆ ಮಾಡುವುದಕ್ಕೆ ನಿಮ್ಮ ಅರಣ್ಯ ಇಲಾಖೆಯವರು ಏನಾದರೂ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆಯೇ ? ತಾವು ಈ ವಿಚಾರದಲ್ಲಿ ತೀವ್ರ ಗಮನಹರಿಸದಿದ್ದರೆ ಈ ಆನೆಗಳನ್ನೂ ಕೂಡ ಅವರು ಕೊಂದುಹಾಕಿಬಿಡುತ್ತಾರೆ. ಅದ್ದರಿಂದ ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಅಶ್ವಾಸನೆ ನೀಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಆಕಡೆ ಗಲಾಟೆ ಆದಮೇಲೆ ಈ ಆನೆಗಳು ಇತ್ತಕಡೆಗೆ ಓಡಿಬಂದಿವೆ ಎಂಬುದನ್ನು ಹೇಳುತ್ತಿದ್ದೇನೆ. ಇತ್ತೀಚೆಗೆ ಪೋಲಿಸರಿಗೂ ಮತ್ತು ವೀರಪ್ಪನ್ ಕಡೆಯವರಿಗೂ ಗಲಾಟೆ ಆದಮೇಲೆ ಆನೆಗಳು ಹೆದರಿ ಈ ಕಡೆಗೆ ಬಂದಿರಬಹುದು. ಆಲ್ಲಿ ಗಲಾಟೆ ಆಗುವುದನ್ನು ತಪ್ಪಿಸಿದರೆ ಈ ಆನೆಗಳು ಪುನಃ ಈ ಕಡೆಯಿಂದ ಆ ಕಡೆಗೆ ಹೋಗಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ.—ವೀರಪ್ಪನ್ ಕಡೆಯವರನ್ನು ಹೆದರಿಸಿ ಎಂದರೆ ನೀವು ಆನೆಗಳನ್ನು ಹೆದರಿಸುವುದೆ ?

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮನ್ನು ನೋಡಿ ಅವು ಹೆದರಿಬಿಟ್ಟಿವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ ನನ್ನ ಹತ್ತಿರ ಇದಕ್ಕೆ ಬೇಕಾದ ಮಾಹಿತಿ ಇದೆ. ಮಾನ್ಯ ಮಂತ್ರಿಗಳು ಅವರ ಅಧಿಕಾರಿಗಳನ್ನು ಕೇಳಲಿ. ಅವರು ಮಾಹಿತಿಗಳನ್ನು ಕೊಡುವುದಕ್ಕೆ ಆಗದಿದ್ದರೆ. ಆಗ ನಾನು ನನ್ನ ಹತ್ತಿರ ಇರತಕ್ಕ ಮಾಹಿತಿಗಳನ್ನು ಕೊಡುತ್ತೇನೆ. ಇವತ್ತು ಏನು ೧೫೦–೨೦೦ ಆನೆಗಳು ಹೆದರಿಕೊಂಡು ಈ ಕಡೆ ಏನು ಬಂದಿವೆ, ಇವುಗಳ ರಕ್ಷಣೆಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ತಾವು ಸಭೆಗೆ ತಿಳಿಸಬೇಕು.

ಅಧ್ಯಕ್ಷರು.—ತಾವು ದಯವಿಟ್ಟು ಈ ಬಗ್ಗೆ ಸ್ಪಡಿ ಮಾಡಿ ಈ ಸಭೆಯಲ್ಲಿ ಒಂದು ಸ್ಟೇಟ್ ಮೆಂಟ್ ಮಾಡಿ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಕಾಸರಗೋಡಿನ ವಿದ್ಯಾರ್ಥಿಗಳಿಗೆ ಸಂಬಂಧ ಪಟ್ಟಂತೆ ನಾನು ತವಂಗ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ಅದು ಏನಾಯಿತು ಎಂಬುದನ್ನು ದಯವಿಟ್ಟು ಹೇಳಬೇಕು. ಏಕೆಂದರೆ ಅದು ಇದುವರೆಗೂ ಬರಲಿಲ್ಲ. ನಾಳೆ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು.—ಅದನ್ನು ನೋಡುತ್ತೇನೆ.

ವಿಷಯ.—ಶಿವಮೊಗ್ಗ ಜಿಲ್ಲೆಯಲ್ಲಿ ಪಠ್ಯ ಪುಸ್ತಕಗಳು ದೊರಕದಿರುವ ಬಗ್ಗೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಶಾಲಾ ಪಠ್ಯ ಪುಸ್ತಕಗಳು ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುತ್ತಿಲ್ಲ. ನಮ್ಮ ಶಿವಮೊಗ್ಗಾದಲ್ಲಿ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಪಠ್ಯ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದಾರೆ. ಇವುಗಳನ್ನು ಟಿ.ಎ.ಪಿ.ಸಿ.ಎಂ.ಎಸ್.ನಲ್ಲೂ ಕೂಡ ಮಾರಾಟ ಮಾಡುತ್ತಿದ್ದಾರೆ. ಅದರೆ ಪುಸ್ತಕಗಳ ಮೇಲೆ ಮುದ್ರಿಸಿರುವ ಬೆಲೆಯೇ ಒಂದಾದರೆ ಅವರು ಮಾರಾಟ ಮಾಡುತ್ತಿರುವ ಬೆಲೆ ಜಾಸ್ತಿ ಆಗಿದೆ. ನಾವು ಹೋಗಿ ಕೇಳಿದರೆ ಇನ್ನೂ ಪಠ್ಯಪುಸ್ತಕಗಳಿನ್ನು ಬಂದಿಲ್ಲ ಎಂದು ಹೇಳುತ್ತಾರೆ. ಅನಂತರ ಬತ್ತ್ಯಾಯ ಮಾಡಿ ಕೇಳಿದರೆ ಆಗ ಹೊರಕ್ಕೆ ತೆಗೆದುಕೊಡುತ್ತಾರೆ. ಆದರೆ ಹೊರಗಡೆ ಬೇರೆಯವರು ಮಾರಾಟ ಮಾಡತಕ್ಕ ಬೆಲೆಗೂ, ಇವರು ಮಾರಾಟ ಮಾಡತಕ್ಕ ಬೆಲೆಗೂ ಬಹಳಷ್ಟು ವ್ಯತ್ಯಾಸ ಇದೆ. ನಮಗೇ ಇವರು ಈ ರೀತಿ ಮಾಡಬೇಕಾದರೆ ಇನ್ನು ಮಕ್ಕಳು ಹೋಗಿ ಪುಸ್ತಕಗಳನ್ನು ಕೇಳಿದರೆ ಇವರು ಕೊಡುತ್ತಾರೆಯೆ ? ಮಕ್ಕಳು ಎಷ್ಟು ಹಣವನ್ನು ಕೊಟ್ಟು ಕೊಂಡುಕೊಳ್ಳಬೇಕು ಎಂಬ ಬಗ್ಗೆ ಬೆಲೆ ಪಟ್ಟಿಯನ್ನು ಹಾಕಿಲ್ಲ ನಮ್ಮ ಶಿವಮೊಗ್ಗಾದಲ್ಲಿ ಬೇರೆಯವರು ವಿಜ್ಞಾನ ಪುಸ್ತಕಕ್ಕೆ ೩ ರೂಪಾಯಿ ೬೦ ಪೈಸೆಗೆ ಮಾರಾಟ ಮಾಡಿದರೆ ಅದೇ ಟಿ.ಎ.ಪಿ.ಸಿ.ಎಂ.ಎಸ್. ನವರು ಅದೇ ಪುಸ್ತಕವನ್ನು ೫ ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಈ ರೀತಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಇಷ್ಟೇ ಅಲ್ಲ ಇವತ್ತು ವಿದ್ಯಾರ್ಥಿಗಳಿಗೆ ಅವಶ್ಯಕವಾಗಿ ಬೇಕಾದಂಥ ಹಲವಾರು ಪುಸ್ತಕಗಳು ಸಿಕ್ಕುತ್ತಿಲ್ಲ ನನ್ನ ಹತ್ತಿರ ಇರತಕ್ಕ ಮಾಹಿತಿಯನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸಿ ಕೊಡುತ್ತೇನೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಸಕಾಲದಲ್ಲಿ, ಮುದ್ರಿತ ಬೆಲೆಗೆ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಸಿಕ್ಕುವಂತೆ ಮಾಡಬೇಕೆಂದು ವಿದ್ಯಾರ್ಥಿಗಳ ಪರವಾಗಿ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು.—ತಾವು ವಿಷಯವನ್ನು ಬರೆದುಕಳುಹಿಸಿ, ಮಾನ್ಯ ಮಂತ್ರಿಗಳು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ ಪುಸ್ತಕಗಳು ಸಿಕ್ಕುತ್ತಿಲ್ಲವೆಂದು ಹೇಳುವುದು ಸರಿಯಲ್ಲ, ಪ್ರತಿ ಎರಡುದಿವಸಗಳಿಗೆ ಒಮ್ಮೆ ನಾನು ಇನ್‌ಫರ್ ಮೇಷನ್‌ನ್ನು ತರಿಸಿಕೊಳ್ಳುತ್ತಿದ್ದೇನೆ. ಇಲ್ಲಿಂದ ಎಷ್ಟು ಪುಸ್ತಕಗಳು ಹೋಗುತ್ತಿವೆ ಎಷ್ಟು ಪುಸ್ತಕಗಳು ವಿತರಣೆಯಾಗಿವೆ ಎಂಬುದರ ಬಗ್ಗೆ ಪ್ರತಿ ಡಿ.ಡಿ.ಪಿ.ಐ.ರವರಿಂದ ಇನ್‌ಫರ್‌ಮೇಷನ್ ಅನ್ನು ತರಿಸಿ ಕೊಳ್ಳುತ್ತಿದ್ದೇನೆ. ಮಾನ್ಯ ಸದಸ್ಯರು ಎತ್ತಿರುವ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಈಗ ನನ್ನ ಗಮನಕ್ಕೆ ತಂದಿರುತ್ತಾರೆ. ಅದನ್ನು ವಿಚಾರ ಮಾಡುತ್ತೇನೆ. ಇನ್ನು ಕಳ್ಳ ವ್ಯಾಪಾರವನ್ನು ಪುಸ್ತಕ ಗಳನ್ನು ಬಚ್ಚಿಟ್ಟು ಮಾಡುತ್ತಿದ್ದಾರೆಂಬ ವಿಚಾರವನ್ನು ಹೇಳಿರುತ್ತಾರೆ, ಅದನ್ನು ವಿಚಾರ ಮಾಡುತ್ತೇನೆ

ಗಮನ ಸೆಳೆಯುವ ಸೂಚನೆಗಳು

ರಾಜ್ಯದಲ್ಲಿ ರೈತರ ಸಾಲ ಮನ್ನಾದ ವಿಚಾರದಿಂದಾಗಿ ಸರ್ಕಾರ ಸಂಘಗಳಿಂದ ಗೊಬ್ಬರದ ವಿತರಣೆ ಸ್ಥಗಿತ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ,, ನಾನು ಈಗಾಗಲೇ ೨-೩ ಬಾರಿ ತಮ್ಮ ಮೂಲಕ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಈಗ ಈ ಪಟ್ಟಿಯಲ್ಲಿ ಬಂದಿರತಕ್ಕಂಥದ್ದನ್ನು ಗಮನ ಸೆಳೆಯಲೋ ಅಥವಾ.....

ಅಧ್ಯಕ್ಷರು.—ತಮಗೆ ಇಷ್ಟಬಂದುದನ್ನು ಗಮನ ಸೆಳೆದು ಮುಗಿಸಿ. ಇದನ್ನೇ ಇಲ್ಲಿ ಚರ್ಚೆ ಮಾಡುತ್ತಾ ಕೂಳಿತುಕೊಳ್ಳಲು ಸಾಧ್ಯವಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇಷ್ಟು ಚರ್ಚೆ ಮಾಡಿದರೂ ಸಚಿವ ಅಧಿಕಾರಿಗಳು ಎಷ್ಟು ನಿರ್ಲಕ್ಷ್ಯ ವಹಿಸಿದ್ದಾರೆ ಎನ್ನುವ ಬಗ್ಗೆ ತಮ್ಮ ಗಮನ ಸೆಳೆಯಬಯಸುತ್ತೇನೆ.

MR. SPEAKER.—When you have nothing to say. I will have to call the next Member.

ಶ್ರೀ ಎಲ್. ಆರ್. ಶಿವರಾಮೇ ಗೌಡ.—ಮಾನ್ಯ ಅಧ್ಯಕ್ಷರೇ ರಾಜ್ಯದ ಸಹಕಾರಿ ಸಂಘಗಳಿಂದ ಗೊಬ್ಬರ ಹಾಗೂ ಪಡಿತರ ವ್ಯವಸ್ಥೆಗಳ ವಿತರಣೆ ಸರಿಯಾಗಿ ಆಗುತ್ತಿಲ್ಲ. ರಾಜ್ಯದಲ್ಲಿ ಸಾಲ ಮನ್ನಾ ವಿಚಾರ ಇತ್ತೀಚೆಗೆ ಪ್ರಸ್ತಾಪದಲ್ಲಿರುವುದರಿಂದ ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಇದ್ದ ದುಡ್ಡಿನ ಬಂಡವಾಳ ಏನಿತ್ತೋ ಆ ಹಣವನ್ನು ಬ್ಯಾಂಕಿನವರು ತೆಗೆದುಕೊಂಡು ಬಂದಿರುತ್ತಾರೆ. ಆದ್ದರಿಂದ ಮೇಲ್ಕಂಡ ವ್ಯವಸಾಯ ಸಹಕಾರ ಸಂಘಗಳು ದುಡ್ಡಿನ ಬಂಡವಾಳವಿಲ್ಲದೆ ಗೊಬ್ಬರ ಮತ್ತು ಪಡಿತರ ವಸ್ತುಗಳನ್ನು ತಂದು ಮಾರಾಟ ಮಾಡುತ್ತಿಲ್ಲ. ಆದ್ದರಿಂದ ರೈತರು ಇಂದಿನ ಪರಿಸ್ಥಿತಿಯಲ್ಲಿ ಗೊಬ್ಬರವನ್ನು ಕಾಳಸಂತೆಯಲ್ಲಿ ೨೫ ರೂಪಾಯಿನಿಂದ ಹಿಡಿದು ೧೦೦ ರೂಪಾಯಿಗಳ ವರೆಗೆ ಒಂದು ಮೂಟೆಗೆ ಚಾಪ್ತಿ ಕೊಟ್ಟು ತೆಗೆದುಕೊಂಡು ಬರತಕ್ಕಂಥ ಪರಿಸ್ಥಿತಿ ಬಂದಿರುವುದರಿಂದ ಸಹಕಾರಿ ಸಂಸ್ಥೆಗಳ ಗಮನವನ್ನು ತಮ್ಮ ಮೂಲಕ ಸೆಳೆಯುತ್ತಿದ್ದೇನೆ.

ಡಾ: ಹೆಚ್. ಆರ್. ರಾಜು (ಸಹಕಾರ ರಾಜ್ಯ ಸಚಿವರು),—ಮಾನ್ಯ ಅಧ್ಯಕ್ಷರೇ, ಶ್ರೀ ಎಲ್. ಆರ್. ಶಿವರಾಮೇಗೌಡರು ಸಹಕಾರಿ ಸಂಸ್ಥೆಗಳು ನಡೆಸುತ್ತಿರುವ ನ್ಯಾಯಬೆಲೆ ಅಂಗಡಿಗಳು ಮತ್ತು ಗೊಬ್ಬರದ ವಿತರಣೆ ಸ್ಥಗಿತಗೊಂಡಿದ್ದು ರೈತರಿಗೆ ತೊಂದರೆಯಾಗಿ ಸಹಕಾರಿ ಸಂಸ್ಥೆಗಳಿಗೆ ರೈತರಿಂದ ಬರಬೇಕಾಗಿದ್ದ ಸಾಲ ವಸೂಲಾತಿ ನಿಂತಿರುವುದರಿಂದ ಸಂಸ್ಥೆಯಲ್ಲಿ (ಸಹಕಾರಿ ದುಡ್ಡಿನ ಬಂಡವಾಳ ಇಲ್ಲದಿರುವುದರಿಂದ ರಾಜ್ಯದ ಎಲ್ಲಾ ಸಹಕಾರಿ ಸಂಸ್ಥೆಗಳಿಂದ ವಿತರಣೆಯಾಗುತ್ತಿದ್ದ ಗೊಬ್ಬರ, ಮತ್ತು ಪಡಿತರ ವ್ಯವಸ್ಥೆ ಸ್ಥಗಿತಗೊಂಡಿದ್ದು ಸರ್ಕಾರ ಈ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳಲು ಸರ್ಕಾರದ ಗಮನ ಸೆಳೆದಿದ್ದಾರೆ.

ಸಹಕಾರಿ ಸಂಸ್ಥೆಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳು ಮತ್ತು ಗೊಬ್ಬರದ ವಿತರಣೆ ಸ್ಥಗಿತಗೊಂಡಿದ್ದು ರೈತರಿಗೆ ತೊಂದರೆ ಆಗಿದೆ ಎನ್ನುವುದು ಸರಿಯಲ್ಲ. ಏಕೆಂದರೆ ರಾಜ್ಯದಲ್ಲಿ ಜೂನ್ ತಿಂಗಳ ಕೊನೆಯವರೆಗೆ ಸುಮಾರು ರೂ. ೨೮೯.೯೦ ಕೋಟಿಗಳ ಬೆಳೆ ಸಾಲ ವಿತರಣೆ ಮಾಡಲಾಗಿದೆ. ಇದರಲ್ಲಿ 'ಬ' ಘಟಕವು ಸೇರಿದ್ದು ಗೊಬ್ಬರವನ್ನು ಕೂಡ ಹುಚಲಾಗಿದೆ. ಅದು ಸುಮಾರು ಶೇಕಡ ೫೦ ರಿಂದ ೬೦ ರಷ್ಟಿದೆ. ಸಹಕಾರಿ ಸಂಸ್ಥೆಗಳಿಗೆ ರೈತರಿಂದ ಬರಬೇಕಾಗಿದ್ದ ಸಾಲ ವಸೂಲಾತಿ ಸಂಪೂರ್ಣ ವಾಗಿ ನಿಂತಿರುವುದಿಲ್ಲ. ಮೇ ತಿಂಗಳ ಕೊನೆಗೆ ಇದ್ದ ಹಾಗೆ ರಾಜ್ಯದಲ್ಲಿ ಶೇ. ೧೪ ರಿಂದ ೫೦ ರಷ್ಟು ಬೆಳೆ ಸಾಲ ವಸೂಲಾತಿ ಆಗಿರುತ್ತದೆ. ಆದ್ದರಿಂದ ಸಾಲ ವಸೂಲಾತಿ ಮತ್ತು ಗೊಬ್ಬರ ವಿತರಣೆ ಕಳೆದ ವರ್ಷಕ್ಕೆ